KAMD310021092011

**2 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮದ್ದೂರು.**

ಉಪಸ್ಥಿತರು : ಶ್ರೀ ಕೆ. ಗೋಪಾಲಕೃಷ್ಣ, ಬಿ.ಎ.ಎಲ್., ಎಲ್.ಎಲ್.ಬಿ.
2 ನೇ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂಎಫ್‌ಸಿ,
ಮದ್ದೂರು

ದಿನಾಂಕ **2** ನೇ ಏಪ್ರಿಲ್ **2026**

**ಅಸಲು ದಾವಾ ಸಂಖ್ಯೆ 89/2011**

**ವಾದಿಯರು :** ಮುಬೀನಾ ಬಾನು ಬಿನ್ ಲೇಟ್ ಗಫರ್ ಖಾನ್
31 ವರ್ಷ, ನಂ.212, 2 ನೇ ಕ್ರಾಸ್
ಮುಸ್ಲಿಂ ಬ್ಲಾಕ್ , ಮದ್ದೂರು

**(ಪ್ರತಿನಿಧಿಸುವವರು ಶ್ರೀ ಸಿ.ಬಿ. ವಕೀಲರು)**

**- ವಿರುದ್ಧ -**

**ಪ್ರತಿವಾದಿಯರು :** **1. ಲತೀಫ್ ಖಾನ್ ಬಿನ್ ಲೇಟ್ ಗಫರ್ ಖಾನ್**
**(ಇವರು ಮೃತಪಟ್ಟಿದ್ದು ,**
**ಇವರ ವಾರಸುದಾರರಾದ )**
1(ಎ) ಪರ್ವೀನ್ ತಾಜ್ ಕೋಂ ಲೇಟ್ ಲತೀಫ್ ಖಾನ್
60 ವರ್ಷ
2. ಅಮೀರ್ ಖಾನ್ ಬಿನ್ ಲೇಟ್ ಗಫರ್ ಖಾನ್
25 ವರ್ಷ
3. ಅಮ್ಜಾದ್ ಖಾನ್ ಬಿನ್ ಲೇಟ್ ಗಫರ್ ಖಾನ್
23 ವರ್ಷ
4. ಸುಲೇಖಾನ್ ಬಿನ್ ಲೇಟ್ ಗಫರ್ ಖಾನ್
20 ವರ್ಷ

5. ಜಬೀನ್ ತಾಜ್ ಬಿನ್ ಲೇಟ್ ಗಫರ್ ಖಾನ್
31 ವರ್ಷ
6. ಯಾಸ್ಮಿನ್ ತಾಜ್ ಬಿನ್ ಲೇಟ್ ಗಫರ್ ಖಾನ್
26 ವರ್ಷ
7. ಹುಮೇರಖಾನಂ ಬಿನ್ ಲೇಟ್ ಗಫರ್ ಖಾನ್
26 ವರ್ಷ
1(ಎ) ಯಿಂದ 6 ರವರು ನಂ.215
2 ನೇ ಕ್ರಾಸ್ , ಮುಸ್ಲಿಂ ಬ್ಲಾಕ್
ಮದ್ದೂರು ಟೌನ್
ಮಂಡ್ಯ ಜಿಲ್ಲೆ

**8. ನಸೀಂ ಉನ್ನೀಸಾ (ಇವರು ಮೃತಪಟ್ಟಿದ್ದು ,**
**ಇವರ ವಾರಸುದಾರರಾದ )**

8 (ಎ) ರೇಷ್ಮಾ ಬಾನು
ಕೋಂ ಸೈಯದ್ ಜಹೀರ್ ಉದ್ದೀನ್
ಬಿನ್ ಜಫ್ರುಲ್ಲಾ ಖಾನ್
40 ವರ್ಷ, ನಂ.388, 6 ನೇ ಕ್ರಾಸ್
ಫಯಾಜ್ಬಾದ್ , ಜೆ ಪಿ ನಗರ ಪೋಸ್ಟ್
ಬೆಂಗಳೂರು-560078
8(ಬಿ) ಪರ್ವೀಜ್ ಖಾನ್
ಬಿನ್ ಲೇಟ್ ಜಫ್ರುಲ್ಲಾ ಖಾನ್
38 ವರ್ಷ,
8(ಸಿ) ಮುಯೀಜ್ ಉಲ್ಲಾಖಾನ್
ಬಿನ್ ಲೇಟ್ ಜಫ್ರುಲ್ಲಾ ಖಾನ್
36 ವರ್ಷ
ನಂ.8(ಬಿ) ಮತ್ತು 8(ಸಿ) ನಂ.213/1
2 ನೇ ಕ್ರಾಸ್, ಮುಸ್ಲಿಂ ಬ್ಲಾಕ್
ಮದ್ದೂರು ಟೌನ್
8(ಡಿ) ಉಜ್ಮಾಖಾನುಮ್ ಕೋಂ ಅಮ್ಜದ್
ಬಿನ್ ಲೇಟ್ ಜಫ್ರುಲ್ಲಾ ಖಾನ್
34 ವರ್ಷ, ನಂ.4, ಬಸವರನಗರ
3 ನೇ ಕ್ರಾಸ್, ಮಾರ್ತಳ್ಳಿ ಪೋಸ್ಟ್
ಬೆಂಗಳೂರು-560 037

**9.ಫಜುಲ್ಲಾ ಉಲ್ಲಾಖಾನ್**
**(ಇವರು ಮೃತಪಟ್ಟಿದ್ದು ,**
**ಇವರ ವಾರಸುದಾರರಾದ )**

9(ಎ) ಶಕೀಲಾ ಖಾನುಮ್
ಕೋಂ ಲೇಟ್ ಫಜೀಉಲ್ಲಾಖಾನ್
45 ವರ್ಷ
9(ಬಿ) ತಬ್ರೇಜ್ ಖಾನ್
ಬಿನ್ ಲೇಟ್ ಫಜೀವುಲ್ಲಾ ಖಾನ್
29 ವರ್ಷ
9(ಸಿ) ಮಹಮ್ಮದ್ ಖಾನ್
ಬಿನ್ ಲೇಟ್ ಫಜೀವುಲ್ಲಾ ಖಾನ್
25 ವರ್ಷ
9(ಡಿ) ಹಸಮ್ ಖಾನ್
ಬಿನ್ ಲೇಟ್ ಫಜೀವುಲ್ಲಾ ಖಾನ್
20 ವರ್ಷ
9(ಎ ಯಿಂದ ಡಿ)
ಪ್ಲಾಟ್ ನಂ.1, ಹೆರಿಟೇಜ್ ಆರ್ ಜಿ ಅಪಾರ್ಟ್ ಮೆಂಟ್
ಸುಂಕಲ್ ಪಾಳ್ಯ, ಕೆಂಗೇರಿ
ಬೆಂಗಳೂರು-560 060
**10. ಇದಾಯತ್ ಉಲ್ಲಾಖಾನ್**
**(ಇವರು ಮೃತಪಟ್ಟಿದ್ದು,**
**ಇವರ ವಾರಸುದಾರರಾದ )**
10(ಎ) ತಹೀರ್ ಖಾನ್
ಬಿನ್ ಲೇಟ್ ಇದಾಯತ್ ಉಲ್ಲಾಖಾನ್
23 ವರ್ಷ
10(ಬಿ) ಮುತಾಹೀರ್ ಖಾನ್
ಬಿನ್ ಲೇಟ್ ಇದಾಯತ್ ಉಲ್ಲಾಖಾನ್
23 ವರ್ಷ
ಪ್ರತಿವಾದಿ 8, 9 ಮತ್ತು 10
ನಂ.212, 2 ನೇ ಕ್ರಾಸ್, ಮುಸ್ಲಿಂ ಬ್ಲಾಕ್
ಮದ್ದೂರು ಟೌನ್ ಮತ್ತು ತಾಲ್ಲೂಕು
ಮಂಡ್ಯ ಜಿಲ್ಲೆ
11. ಎಸ್ ಆರ್ ಪ್ರಫುಲ್ಲಾ ಚಂದ್ರ
ಬಿನ್ ಲೇಟ್ ಎಸ್ ಕೆ ಕೆಂಪಯ್ಯ
51 ವರ್ಷ, ಸೋಮನಹಳ್ಳಿ ಗ್ರಾಮ
ಮದ್ದೂರು ತಾ;, ಮಂಡ್ಯ ಜಿಲ್ಲೆ
12(14) ಸುದೇಶ್ ನಾಯ್ಕ್
ಬಿನ್ ಲೇಟ್ ಶ್ರೀಧರ್ ನಾಯ್ಕ್

52 ವರ್ಷ, ನಂ.309
ಬಿಂದು ಅರ್ಪಣ ಅಪಾರ್ಟ್ ಮೆಂಟ್
ಉತ್ತರಹಳ್ಳಿ ಮೈನ್ ರೋಡ್
ಪದ್ಮನಾಭನಗರ
ಬೆಂಗಳೂರು-560061.
(ಪ್ರತಿವಾದಿ 1(ಎ ಮತ್ತು ಬಿ), 8 (ಎ ಯಿಂದ ಡಿ),
9(ಎ ಯಿಂದ ಡಿ) 10(ಎ ಮತ್ತು ಬಿ ರವರು ಹಾಗೂ
ಪ್ರತಿವಾದಿ 11 ಮತ್ತು 12 ರವರು ಏಕಪಕ್ಷೀಯವಾಗಿರುತ್ತಾರೆ.
**(ಪ್ರತಿವಾದಿ 2 ರಿಂದ 9 ರವರ ಪರ ಬಿ ಎ ಜಿ ವಕೀಲರು)**

| | | |
|---|---|---|
| ದಾವೆಯನ್ನು ದಾಖಲು ಮಾಡಿದ ದಿನಾಂಕ | : | 19-03-2011 |
| ದಾವೆಯ ಸ್ವರೂಪ | : | ಘೋಷಣಾತ್ಮಕ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ |
| ಸಾಕ್ಷಿ ವಿಚಾರಣೆಯ ಪ್ರಾರಂಭವಾದ ದಿನಾಂಕ | : | 08-06-2015 |
| ತೀರ್ಪನ್ನು ಘೋಷಿಸಿಲಾದ ದಿನಾಂಕ | : | 02-04-2026 |
| ಒಟ್ಟು ಕಾಲಾವಕಾಶ | : | ವರ್ಷ ತಿಂಗಳು ದಿವಸ<br>**15 00 14** |

## ತೀರ್ಪು

ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹಕ್ಕು ಘೋಷಣೆ ಹಾಗೂ ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ಸಲ್ಲಿಸಿದ್ದು, ದಾವಾ ಆಸ್ತಿಗೆ ವಾದಿಯನ್ನು ಹಕ್ಕುದಾರರು ಮತ್ತು ಮಾಲೀಕರು ಎಂದು ಘೋಷಿಸುವಂತೆಯೂ ಹಾಗೂ ದಾವಾ ಆಸ್ತಿಗೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿಯು 13 ನೇ ಪ್ರತಿವಾದಿಗೆ ಬರೆದು ಕೊಟ್ಟಿರುವ ದಿನಾಂಕ 26.03.2010 ರ ನೋಂದಾಯಿತ ಕ್ರಯಪತ್ರವನ್ನು ರದ್ದುಪಡಿಸುವಂತೆಯೂ ಹಾಗೂ ಅದೇ ರೀತಿ 13 ನೇ ಪ್ರತಿವಾದಿಯು 14 ನೇ ಪ್ರತಿವಾದಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಿನಾಂಕ 09-02-2012 ರಂದು ಆಗಿರುವ ಕ್ರಯಪತ್ರವನ್ನು ರದ್ದುಪಡಿಸುವಂತೆಯೂ ಹಾಗೂ ದಾವಾ ಆಸ್ತಿಯ ವಾದಿಯ ಸ್ವಾಧೀನಕ್ಕೆ ಪ್ರತಿವಾದಿಗಳು ತಂಟೆ ತಕರಾರು ಮಾಡಬಾರದೆಂದು ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ಸಲ್ಲಿಸಿರುತ್ತಾರೆ.

**2. ವಾದಿಯ ದಾವಾ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ :**

ದಾವಾ ಆಸ್ತಿಯು ಮದ್ದೂರು ತಾಲೂಕು, ಆತಗೂರು ಹೋಬಳಿ, ಹೂತಗೆರೆ ಗ್ರಾಮದ ಸರ್ವೆ ನಂಬರ್ 282 (ಹಳೆ ಸರ್ವೆ ನಂಬರ್ 118/3) ಮತ್ತು ಪ್ರಸ್ತುತ ರೀಸರ್ವೇ ನಂಬರ್ 628 ರ ವಿಸ್ತೀರ್ಣ 4.2.11.84 ಎಕರೆ ಜಮೀನಾಗಿರುತ್ತದೆ. ದಾವಾ ಆಸ್ತಿಯನ್ನು ವಾದಿಯ ಹಿರಿಯರಾದ ಲೇಟ್ ಗಫರ್ ಖಾನ್ ರವರು ಆತಗೂರು ಗ್ರಾಮದಲ್ಲಿ ದಿನಾಂಕ 15-05-1966 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಎರಡು ಆಸ್ತಿಗಳನ್ನು ಖರೀದಿಸಿರುತ್ತಾರೆ. ಸದರಿ ಆಸ್ತಿಗಳು ಲೇಟ್ ಗಫರ್ ಖಾನ್ ರವರ ಸ್ವಯಾರ್ಜಿತವಾದ ಆಸ್ತಿಗಳಾಗಿರುತ್ತವೆ. ಗಫರ್ ಖಾನ್ ರವರು ತಮ್ಮ ಜೀವಿತ ಕಾಲದವರೆಗೆ ಸದರಿ ಆಸ್ತಿಗಳ ಹಕ್ಕುದಾರ ಮತ್ತು ಮಾಲೀಕರಾಗಿ ಸ್ವಾಧೀನದಲ್ಲಿದ್ದರು. ಇವರು ದಿನಾಂಕ 03-04-1992 ರಂದು ಮೃತಪಟ್ಟಿರುತ್ತಾರೆ. ಗಫರ್ ಖಾನ್ ರವರಿಗೆ ವಾದಿ ಮತ್ತು ಪ್ರತಿವಾದಿ ನಂ.1 ಮತ್ತು 8 ರಿಂದ 11 ಮತ್ತು ಇವರ ಹೆಂಡತಿ 12 ನೇ ಪ್ರತಿವಾದಿಯು ಕಾನೂನುಬದ್ಧ ವಾರಸುದಾರರಾಗಿರುತ್ತಾರೆ. ಗಫರ್ ಖಾನ್ ರವರ ಮರಣದ ನಂತರ ಒಟ್ಟು ಕುಟುಂಬದಲ್ಲಿ ಸದರಿ ಆಸ್ತಿಯು ಮುಂದುವರೆದಿರುತ್ತದೆ. ಆದ್ದರಿಂದ ಸದರಿ ಆಸ್ತಿಯು ಮೇಲ್ಕಂಡವರ ಪಿತ್ರಾರ್ಜಿತವಾದ ಆಸ್ತಿಯಾಗಿರುತ್ತದೆ. ಪರಿಸ್ಥಿತಿ ಈ ರೀತಿ ಇರುವಾಗ ಮೇಲ್ಕಂಡ ಒಟ್ಟು ಕುಟುಂಬದವರುಗಳು ಒಪ್ಪಿ ದಿನಾಂಕ 14-08-2000 ರಂದು ಪಂಚಾಯತ್ ಪಾಲುಪಟ್ಟಿಯನ್ನು ಮಾಡಿಕೊಂಡಿದ್ದು, ಸದರಿ ಪಂಚಾಯತ್ ಪಾಲುಪಾರಿಕತ್ತಿನಲ್ಲಿ ದಾವಾ ಆಸ್ತಿಯು ಸೇರಿರುವುದಿಲ್ಲ. 1 ನೇ ಪ್ರತಿವಾದಿಯು ಇತರ ಒಟ್ಟು ಕುಟುಂಬದ ಸದಸ್ಯರ ಅನುಮತಿ ಇಲ್ಲದೆ ಅಕ್ರಮವಾಗಿ ತಮ್ಮ ಹೆಸರಿಗೆ ಖಾತೆಯನ್ನು ಮಾಡಿಕೊಂಡಿರುತ್ತಾರೆ.

3. ವಾದಿಯು ತಮ್ಮ ದಾವಾ ಪತ್ರದಲ್ಲಿ ಮುಂದುವರೆದು ತಿಳಿಸುತ್ತಾ, 1 ನೇ ಪ್ರತಿವಾದಿಯು ಅಕ್ರಮವಾಗಿ ಒಟ್ಟು ಕುಟುಂಬದ ಯಾವುದೇ ಸದಸ್ಯರ ಸಹಿಗಳನ್ನು ಪಡೆಯದೆ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. 1 ನೇ ಪ್ರತಿವಾದಿಗೆ 2000 ನೇ ಸಾಲಿನಲ್ಲಿ ಆದ ಪಂಚಾಯತ್ ಪಾಲುಪಟ್ಟಿಯಲ್ಲಿ ದಾವಾ ಆಸ್ತಿ ಸೇರಿರುವುದಿಲ್ಲವೆಂದು ತಿಳಿದಿದ್ದರೂ ಸಹ ವಾದಿ ಮತ್ತು ಇತರ ಕುಟುಂಬದ ಸದಸ್ಯರಿಗೆ ಮೋಸ ಮಾಡಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಸದರಿ ಪಂಚಾಯತ್ ಪಾಲುಪಟ್ಟಿಯಲ್ಲಿಯೇ 1 ನೇ ಪ್ರತಿವಾದಿಯು ಅವಿವಾಹಿತ ಕುಟುಂಬ ಸದಸ್ಯರ ವಿವಾಹ ಮತ್ತು ಮನೆಯ ಜವಬ್ದಾರಿಯನ್ನು ನೋಡಿಕೊಳ್ಳುವುದಾಗಿ ತಿಳಿಸಿರುತ್ತಾರೆ. ಆದರೆ ಆ

ಕಾರ್ಯವನ್ನು 1 ನೇ ಪ್ರತಿವಾದಿಯು ಮಾಡಿರುವುದಿಲ್ಲ. 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದ ಸದಸ್ಯರು ಅಕ್ರಮವಾಗಿ ಖಾತೆ ಮಾಡಿಕೊಂಡು 13 ನೇ ಪ್ರತಿವಾದಿಗೆ ದಿನಾಂಕ 26-03-2010 ರಂದು ನೋಂದಾಯಿತ ಕ್ರಯಪತ್ರವನ್ನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟಿರುತ್ತಾರೆ. 1 ನೇ ಪ್ರತಿವಾದಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದಿದ್ದರೂ ಕೂಡ ಸದರಿ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯ ಪತ್ರವು ವಾದಿಯ ಹಕ್ಕಿಗೆ ಬದ್ಧಪಡಿಸುವುದಿಲ್ಲ. ನಂತರದಲ್ಲಿ 13 ನೇ ಪ್ರತಿವಾದಿಯು ಅಕ್ರಮವಾಗಿ 14 ನೇ ಪ್ರತಿವಾದಿಗೆ ದಿನಾಂಕ 09-02-2012 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಆದ್ದರಿಂದ ಸದರಿ ಕ್ರಯ ಪತ್ರವು ವಾದಿಯ ಹಕ್ಕಿಗೆ ಬದ್ಧಪಡಿಸುವುದಿಲ್ಲ. ಆದ್ದರಿಂದ ಸದರಿ ಕ್ರಯ ಪತ್ರವು ಕಾನೂನುಬಾಹಿರ ಮತ್ತು ಅಕ್ರಮವಾದ ಕ್ರಯಪತ್ರವಾಗಿದ್ದು, ರದ್ದುಪಡಿಸುವಂತಹ ಪತ್ರವಾಗಿರುತ್ತದೆ. ಆದಕಾರಣದಿಂದ ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಹೂಡಿರುವುದಾಗಿ ತಿಳಿಸಿರುತ್ತಾರೆ.

4. ವಾದಿಯ ದಾವೆಯನ್ನು ನ್ಯಾಯಾಲಯದಲ್ಲಿ ನೋಂದಣಿ ಮಾಡಿಕೊಂಡು ಪ್ರತಿವಾದಿಗಳಿಗೆ ಸಮನ್ಸ್ ಜಾರಿ ಮಾಡಿದ್ದು, ಸದರಿ ಸಮನ್ಸ್ ಗಳು ಪ್ರತಿವಾದಿಗಳಿಗೆ ಖುದ್ದು ಜಾರಿಯಾಗಿರುತ್ತದೆ. ದಾವೆಯ ವಿಚಾರಣೆಯ ಸಮಯದಲ್ಲಿ 1 ನೇ ಪ್ರತಿವಾದಿಯು ಮೃತಪಟ್ಟಿದ್ದು, ಅವರ ವಾರಸುದಾರರಾದ ಪ್ರತಿವಾದಿ 1(ಎ)ರವರನ್ನು ಪಕ್ಷಗಾರರಾಗಿ ಮಾಡಿದ್ದು, ಅವರಿಗೆ ನೋಟೀಸ್ ಜಾರಿ ಮಾಡಿದರೂ ನ್ಯಾಯಾಲಯಕ್ಕೆ ಹಾಜರಾಗದೆ ಏಕಪಕ್ಷೀಯವಾಗಿರುತ್ತಾರೆ. 2 ರಿಂದ 7 ನೇ ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಹಾಜರಾಗಿದ್ದು, ತಮ್ಮ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಅದೇ ರೀತಿ ದಾವೆಯ ವಿಚಾರಣೆಯ ಸಮಯದಲ್ಲಿ 8 ನೇ ಪ್ರತಿವಾದಿಯು ಮೃತಪಟ್ಟಿದ್ದು, ಅವರ ವಾರಸುದಾರರಾದ 8(ಎ) ರಿಂದ 8(ಡಿ) ರವರನ್ನು ಪಕ್ಷಗಾರರಾಗಿ ಮಾಡಿದ್ದು, ಇವರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಿದ್ದು, ಅವರು ನ್ಯಾಯಾಲಯಕ್ಕೆ ಹಾಜರಾಗದೆ ಏಕಪಕ್ಷೀಯರಾಗಿರುತ್ತಾರೆ. ಅದೇ ರೀತಿ 9 ನೇ ಪ್ರತಿವಾದಿಯು ಮೃತಪಟ್ಟಿದ್ದು, ಅವರಿಗೆ 9(ಎ) ರಿಂದ 9(ಡಿ) ರವರು ವಾರಸುದಾರರಾಗಿರುತ್ತಾರೆ. ಇವರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಿದ್ದು, ಅವರು ನ್ಯಾಯಾಲಯಕ್ಕೆ ಹಾಜರಾಗದೆ ಏಕಪಕ್ಷೀಯರಾಗಿರುತ್ತಾರೆ. ಅದೇ ರೀತಿ 10 ನೇ ಪ್ರತಿವಾದಿಯು ಮೃತಪಟ್ಟಿದ್ದು, ಇವರಿಗೆ 10(ಎ) ಮತ್ತು (ಬಿ) ವಾರಸುದಾರರಾಗಿದ್ದು, ಇವರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾಗಿದ್ದರೂ ಹಾಜರಾಗದೆ ಏಕಪಕ್ಷೀಯರಾಗಿರುತ್ತಾರೆ. ಅದೇ ರೀತಿ 11 ರಿಂದ 14 ನೇ ಪ್ರತಿವಾದಿಗಳಿಗೆ ನೋಟೀಸ್ ಜಾರಿ ಮಾಡಿದ್ದು, ಇವರು ನ್ಯಾಯಾಲಯಕ್ಕೆ ಹಾಜರಾಗದೆ ಏಕಪಕ್ಷೀಯವಾಗಿರುತ್ತಾರೆ. ನಂತರದಲ್ಲಿ

ವಾದಿಯು ಅರ್ಜಿ ಸಲ್ಲಿಸಿ 12 ಮತ್ತು 13 ನೇ ಪ್ರತಿವಾದಿಗಳನ್ನು ರದ್ದುಪಡಿಸಿದ್ದು, ನಂತರ 14 ನೇ ಪ್ರತಿವಾದಿಯು ಕ್ರಮ ಸಂಖ್ಯೆ 12 ರಲ್ಲಿ ಈ ದಾವೆಯಲ್ಲಿ ಮುಂದುವರೆದಿರುತ್ತಾರೆ.

**5. 1** ರಿಂದ **7** ನೇ ಪ್ರತಿವಾದಿಗಳಿಗೆ ಸಲ್ಲಿಸಿರುವ ಲಿಖಿತ ಹೇಳಿಕೆಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ **;**

ವಾದಿಯು ಸಲ್ಲಿಸಿರುವ ದಾವೆಯು ವಾಸ್ತವಾಂಶಗಳಿಂದಾಗಲೀ ಹಾಗೂ ಕಾನೂನಿನ ಅಂಶಗಳಿಂದಾಗಲೀ ಊರ್ಜಿತವಾಗುವುದಿಲ್ಲ. ವಾದಿಯ ತಂದೆಯು ದಾವಾ ಆಸ್ತಿಯನ್ನು ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿರುತ್ತಾರೆಂಬ ವಿಚಾರ ಸರಿ ಇರುತ್ತದೆ. ಮೃತ ಗಫರ್ ಖಾನ್ ರವರಿಗೆ 4 ಜನ ಗಂಡು ಮಕ್ಕಳು ಮತ್ತು 5 ಜನ ಹೆಣ್ಣು ಮಕ್ಕಳುಗಳು ಇರುತ್ತಾರೆ. 1962 ಮತ್ತು 1966 ನೇ ಇಸವಿಯಲ್ಲಿ ಹೂತಗೆರೆ ಗ್ರಾಮದಲ್ಲಿ ಹಯತ್ ಬೇಗ್ ಸಾಹೇಬರ ಮಗ ನಜೀರ್ ಬೇಗ್ ಸಾಹೇಬರಿಂದ 2 ಆಸ್ತಿಗಳನ್ನು ಖರೀದಿಸಿದ್ದರು. ಗಫರ್ ಖಾನ್ ಅವರ ಮರಣದ ನಂತರ ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ದಿನಾಂಕ 14-08-2000 ರಲ್ಲಿ ಗಫರ್ ಖಾನ್ ರವರ ವಾರಸುದಾರರೆಲ್ಲರೂ ವಿಭಾಗ ಮಾಡಿಕೊಂಡಿದ್ದರು ಎಂಬುದು ಸುಳ್ಳಿನಿಂದ ಕೂಡಿರುತ್ತದೆ. ಸದರಿ ವಿಭಾಗಕ್ಕೆ ಎಲ್ಲಾ ವಾರಸುದಾರರು ವಿಭಾಗಪತ್ರ ಬರೆದು ಸಹಿ ಮಾಡಿದ್ದರು ಎಂಬ ವಿಚಾರ ಸಹ ಸುಳ್ಳಿನಿಂದ ಕೂಡಿರುತ್ತದೆ. ಸದರಿ ವಿಭಾಗ ಪತ್ರವು ಯಾವಾಗಲೂ ಆಗಿರುವುದಿಲ್ಲ. ಸದರಿ ಅಂಶವನ್ನು ವಾದಿಯು ಈ ದಾವೆಗೋಸ್ಕರವಾಗಿ ಸೃಷ್ಟಿಸಿಕೊಂಡಿರುತ್ತಾರೆ. ಸದರಿ ಆಸ್ತಿಗಳು ಗಫರ್ ಖಾನ್ ರವರ ಆಸ್ತಿಯಾಗಿದ್ದು, ಅವುಗಳನ್ನು ಅವರ ಜೀವಿತಾವಧಿಯಲ್ಲಿ ಯಾವ ರೀತಿಯಲ್ಲೂ ಯಾರಿಗೂ ಪರಭಾರೆ ಮಾಡಿರುವುದಿಲ್ಲ. ಈ ದಾವೆಯಲ್ಲಿ 1 ನೇ ಪ್ರತಿವಾದಿ, 8 ರಿಂದ 10 ಮತ್ತು 12 ನೇ ಪ್ರತಿವಾದಿಗಳು ಮೃತಪಟ್ಟಿರುತ್ತಾರೆ. ಗಫರ್ ಖಾನ್ ರವರ ಮರಣದ ನಂತರ ವಾದಿ ಮುಬೀನಾ ಬಾನು ಸೇರಿದಂತೆ ಅವರ ವಾರಸುದಾರರೆಲ್ಲರೂ ಸೇರಿ ತಲಾ 5000/- ರೂ.ಗಳನ್ನು ಪಡೆದುಕೊಂಡು ರೆವಿನ್ಯೂ ಫಾರಂ ನಂ.19 ಮತ್ತು 21 ಕ್ಕೆ ಸಹಿ ಮಾಡಿಕೊಟ್ಟು, ಸದರಿ ಆಸ್ತಿಯಲ್ಲಿ ತಮಗಿದ್ದ ಹಕ್ಕು ಮತ್ತು ಹಿತಾಸಕ್ತಿ ಮತ್ತು ಅನುಭವವನ್ನು ಮತ್ತು ಸ್ವಾಧೀನವನ್ನು 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದರು. ಆ ಮೂಲಕ ಸದರಿ ಆಸ್ತಿಯಲ್ಲಿ ತಮಗಿದ್ದ ಹಕ್ಕನ್ನು ಸಂಪೂರ್ಣವಾಗಿ ತ್ಯಜಿಸಿ ಕಳೆದುಕೊಂಡಿರುತ್ತಾರೆ. ಈ ಪ್ರಕಾರವಾಗಿ 1 ನೇ ಪ್ರತಿವಾದಿಯು ಎಂ.ಆರ್.4/1992-93 ರಂತೆ ಖಾತಾ ಬದಲಾವಣೆ ಮಾಡಿಕೊಂಡಿರುತ್ತಾರೆ. ಈ ರೀತಿ 1 ನೇ ಪ್ರತಿವಾದಿಯು ದಾವಾ ಆಸ್ತಿಯ ಹಕ್ಕುದಾರ, ಮಾಲೀಕರಾಗಿದ್ದು, ಆ ರೀತಿ ದಾವಾ ಆಸ್ತಿಯ ಮಾಲೀಕರಾಗಿ ಸ್ವಾಧೀನದಲ್ಲಿದ್ದರು. ವಾದಿಯು ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಅದೇ ರೀತಿ 1 ನೇ ಪ್ರತಿವಾದಿಯಾದ ಲತೀಫ್ ಖಾನ್ ರವರ ವಾರಸುದಾರರಿಂದ ಸಹಿ ಪಡೆದುಕೊಂಡು

ಕಾನೂನುಬದ್ಧವಾಗಿ ಖಾತೆ ಮಾಡಿರುವುದು ಸರಿಯಾದ ಕ್ರಮವಾಗಿರುತ್ತದೆ. ಆದರೆ ವಾದಿಯು ತಮ್ಮ ವಾದ ಪತ್ರದಲ್ಲಿ ತಿಳಿಸಿರುವಂತೆ 2000 ನೇ ಇಸವಿಯಲ್ಲಿ ವಾದಿಗೆ ದಾವಾ ಆಸ್ತಿಯ ಪಾಲು ಪಟ್ಟಿಯ ಮೂಲಕ ನೀಡಲಾಗಿರುತ್ತದೆ. ಅದು ಗೊತ್ತಿದ್ದರೂ ಸಹ ಮನೆಯ ಹಿರಿಯ ಸದಸ್ಯನಾಗಿ ಅಪನಂಬಿಕೆಯಿಂದ ವರ್ತಿಸಿದ್ದಾರೆಂದು ತಿಳಿಸಿರುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ.

6. 1 ರಿಂದ 7 ನೇ ಪ್ರತಿವಾದಿಗಳು ಮುಂದುವರೆದು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸುತ್ತಾ, ವಾದಿಯು ದಾವಾ ಆಸ್ತಿಯನ್ನು 2000 ನೇ ಇಸವಿಯ ಪಾಲುಪಟ್ಟಿಯಲ್ಲಿ ಅದನ್ನು ತನಗೆ ಮದುವೆ ಖರ್ಚಿಗೆ ಬಿಟ್ಟಿದ್ದರು ಎಂದು ಹೇಳಿರುವುದು ಸಹ ಸುಳ್ಳಿನಿಂದ ಕೂಡಿರುತ್ತದೆ. ಸದರಿ ಪಾಲುಪಟ್ಟಿಯು ಸೃಷ್ಠಿತ ದಾಖಲೆಯಾಗಿದ್ದು, ಅದಕ್ಕೆ ಯಾವುದೇ ಕಾನೂನಿನ ಮಾನ್ಯತೆ ಇರುವುದಿಲ್ಲ. ಪಾಲುಪಟ್ಟಿಯಂತೆ ಯಾರು, ಯಾವತ್ತು, ಯಾವುದೇ ರೀತಿ ವ್ಯವಹರಿಸಿಲ್ಲ ಮತ್ತು ಸದರಿ ಪಾಲುಪಟ್ಟಿ ಯಾವತ್ತು ಬೆಳಕಿಗೆ ಬಂದಿಲ್ಲ. ಆದಕಾರಣ ಅದು ಸೃಷ್ಟಿತವಾದ ದಾಖಲೆಯಾಗಿರುತ್ತದೆ. 1 ನೇ ಪ್ರತಿವಾದಿಯು ವಾದಿ ಮತ್ತು ಕುಟುಂಬದ ಇತರ ಪ್ರತಿಯೊಬ್ಬ ಸದಸ್ಯರಿಗೂ ತಲಾ 5000/- ರೂ.ಗಳನ್ನು ನೀಡಿ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ಖಾತೆಯಾದ ನಂತರ, ಸದರಿ ಆಸ್ತಿಯ ಸಂಪೂರ್ಣ ಮಾಲೀಕರಾಗಿದ್ದರು. ಸದರಿ ಆಸ್ತಿಯಲ್ಲಿ 1 ನೇ ಪ್ರತಿವಾದಿ ಎರುಡ ಕೊಳವೆ ಬಾವಿಗಳನ್ನು ಕೊರೆಸಿದ್ದರು. ಅದಕ್ಕೆ ವಿದ್ಯುಚ್ಛಕ್ತಿ ಸರಬರಾಜನ್ನು ಸಹ ಪಡೆದಿರುತ್ತಾರೆ. ದಾವಾ ಆಸ್ತಿ ಹಳ್ಳದಿಂದ ಕೂಡಿದ್ದು, ಅದನ್ನು ಸಮತಟ್ಟು ಮಾಡಿಸಿ ಅದಕ್ಕೆ ಹೆಚ್ಚಿನ ಬಂಡವಾಳವನ್ನು ಹೂಡಿದ್ದರು. ಸದರಿ ಆಸ್ತಿಯಲ್ಲಿ ಇಟ್ಟಿಗೆ ಫ್ಯಾಕ್ಟರಿ ನಿರ್ಮಿಸುವ ದೃಷ್ಠಿಯಿಂದ ಸದರಿ ಜಮೀನಿನ ಅನ್ಯಕ್ರಾಂತ ಸಹ ಮಾಡಿಸಿದ್ದರು. ಅನಂತರ ಸದರಿ ಜಮೀನನ್ನು ಅಭಿವೃದ್ಧಿಪಡಿಸಲು ಮತ್ತು ಟ್ರ್ಯಾಕ್ಟರ್ ಮತ್ತು ಟ್ರೈಲರನ್ನು ಖರೀದಿಸಲು ಕೆನರಾ ಬ್ಯಾಂಕ್, ಮಂಡ್ಯ ಶಾಖೆಯಲ್ಲಿ ರೂ.5,50,000/- ಗಳನ್ನು ಸಾಲ ಪಡೆದುಕೊಂಡಿದ್ದರು. ಹಾಗಾಗಿ ಸದರಿ ಆಸ್ತಿಯನ್ನು 13 ನೇ ಪ್ರತಿವಾದಿ ಎಸ್ .ಕೆ. ಪ್ರಫುಲ್ಲಾ ಚಂದ್ರರವರಿಗೆ ಮಾರಾಟ ಮಾಡಿ ಸ್ವಾಧೀನ ವಹಿಸಿರುತ್ತಾರೆ. 1 ನೇ ಪ್ರತಿವಾದಿ ಸದರಿ ಸಾಲ ತೀರಿಸಲು ಇನ್ನು 50,000/- ರೂ.ಗಳು ಇನ್ನೂ ಬಾಕಿ ಇರುತ್ತದೆ. ಸದರಿ 13 ನೇ ಪ್ರತಿವಾದಿ ಸಹ ಹೆಚ್ಚಿನ ಬಂಡವಾಳವನ್ನು ಸದರಿ ಆಸ್ತಿಯಲ್ಲಿ ಖರೀದಿ ನಂತರ ಹೂಡಿಕೆ ಮಾಡಿರುತ್ತಾರೆ. ಸದರಿ ವಿಚಾರ ಗೊತ್ತಿದ್ದರೂ ಸಹ ವಾದಿ ಅವರಿಂದ ಅಕ್ರಮ ಲಾಭ ಪಡೆಯುವ ಕಾರಣದಿಂದ 8 ರಿಂದ 12 ನೇ ಪ್ರತಿವಾದಿಗಳ ಚಿತಾವಣೆ ಮೇರೆಗೆ ಈ ದಾವೆಯಲ್ಲಿ ಅಕ್ರಮವಾಗಿ 1 ನೇ ಪ್ರತಿವಾದಿ ಮತ್ತು 2 ರಿಂದ 7 ನೇ ಪ್ರತಿವಾದಿಗಳು ಈ ದಾವೆಗೆ ಅವಶ್ಯಕವಿಲ್ಲದಿದ್ದರೂ ಸಹ ಸುಳ್ಳು ಅಂಶಗಳನ್ನು ಸೃಷ್ಠಿಸಿಕೊಂಡು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. ಈಗಲೂ ಸಹ ದಾವಾ ಆಸ್ತಿಯಲ್ಲಿ 13 ನೇ ಪ್ರತಿವಾದಿಯೇ ದಾವಾ ಆಸ್ತಿಯಲ್ಲಿ

ಸ್ವಾಧೀನಲ್ಲಿರುತ್ತಾರೆ. ಅಲ್ಲದೆ ವಾದಿಯು ಒಟ್ಟು ಕುಟುಂಬಕ್ಕೆ ಇತರ ಆಸ್ತಿಗಳನ್ನು ಸಹ ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ದಾವಾ ಆಸ್ತಿಯನ್ನು 13 ನೇ ಪ್ರತಿವಾದಿಯು 2012 ರಲ್ಲಿ ಸುದೇಶನಾಯಕ ಎಂಬ ವ್ಯಕ್ತಿಗೆ ಮಾರಾಟ ಮಾಡಿರುವ ಬಗ್ಗೆ ತಿಳಿಸಿರುತ್ತಾರೆ. ಆದರೆ ಅವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ. ಆದುದರಿಂದ ವಾದಿಯ ದಾವೆಯು ಊರ್ಜಿತವಾಗುವುದಿಲ್ಲ. ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ವಾದಿಯ ದಾವೆಯನ್ನು ಖರ್ಚು ಸಹಿತ ವಜಾ ಮಾಡುವಂತೆ ವಿನಂತಿಸಿಕೊಂಡಿರುತ್ತಾರೆ.

7. ವಾದಿಯ ವಾದ ಪತ್ರ ಮತ್ತು ಪ್ರತಿವಾದಿಯರ ತಕರಾರು ಹಾಗೂ ಉಭಯ ಪಕ್ಷಗಾರರ ಪ್ರತಿಪಾದನೆಯನ್ನು ಆಧರಿಸಿ ನ್ಯಾಯಾಲಯದಲ್ಲಿ ಈ ಕೆಳಕಂಡ ವಿವಾದಾಂಶಗಳನ್ನು ರೂಪಿಸಿರುತ್ತಾರೆ.

## ISSUES

1. Whether the plaintiff prove that she is the absolute owner of the suit schedule property by virtue of panchayath palu parikath dated 14-08-2000?

2. Whether the plaintiff proves that she is possession of the suit schedule property?

3. Whether the plaintiff proves that defendant No.1 illegally changed khata in his name without obtaining consent of plaintiff and other legal heirs of late Ghafar Khan?

4. Whether the plaintiff further proves that, sale deed dated 26-03-2010 executed by $1^{st}$ defendant in favour of $13^{th}$ defendant over the suit schedule property is null and void?

5. Whether the plaintiff is entitled for the relief of declaration and permanent injunction?

**<u>Addl. Issue No.1 :</u>** Whether the plaintiff proves that, the defendant No.13 sold the suit property in favour of defendant No.14(12) on 09-02-2012 through registered sale deed is not binding to plaintiff and the same is null and void?

6. What order or decree?

**8**. ವಾದಿಯು ತಮ್ಮ ದಾವೆಯನ್ನು ಸಾಬೀತುಪಡಿಸುವ ಉದ್ದೇಶದಿಂದ ತನ್ನನ್ನು ಪಿಡಬ್ಲೂ.1 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ತನ್ನ ಪರವಾಗಿ ನಿಪಿ.1 ರಿಂದ 16 ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಅದೇ ರೀತಿ ತಮ್ಮ ಪರ ಸಾಕ್ಷಿದಾರರಾಗಿ ಶಬೀನಾಬಾನು ರವರು ತಮ್ಮನ್ನು ಪಿಡಬ್ಲ್ಯೂ.2 ಎಂದು ಮತ್ತು ಹಜೀರಾ ಖಾನಂ ರವರು ತಮ್ಮನ್ನು ಪಿಡಬ್ಲ್ಯೂ.3 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ಅದೇ ರೀತಿ 1 ರಿಂದ 7 ನೇ ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯ ಅಂಶಗಳನ್ನು ಸಾಬೀತುಪಡಿಸುವ ಉದ್ದೇಶದಿಂದ 2 ನೇ ಪ್ರತಿವಾದಿಯು ಇತರ ಪ್ರತಿವಾದಿ 3 ರಿಂದ 7 ಮತ್ತು 1(ಎ) ಪರವಾಗಿ ತನ್ನನ್ನು ಡಿಡಬ್ಲ್ಯೂ.1 ಎಂದು ವಿಚಾರಣೆ ಮಾಡಿಕೊಂಡಿದ್ದು, ತಮ್ಮ ಪರವಾಗಿ ನಿಡಿ.1 ರಿಂದ ನಿಡಿ.7 ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಈ ರೀತಿ ಉಭಯ ಪಕ್ಷಗಾರರುಗಳ ವಕೀಲರು ಇವರುಗಳನ್ನು ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ.

9. ವಾದಿ ಹಾಗೂ ಪ್ರತಿವಾದಿಯರ ವಾದಮಂಡನೆ ಮತ್ತು ನ್ಯಾಯಾಲಯದ ಮುಂದಿರುವ ಸಂಪೂರ್ಣ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಪರಿಶೀಲಿಸಲಾಯಿತು. ಈ ಮೇಲ್ಕಂಡ ವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತವೆ.

ವಿವಾದಾಂಶ ನಂ.1 : ನಕಾರಾತ್ಮಕವಾಗಿ
ವಿವಾದಾಂಶ ನಂ.2 : ನಕಾರಾತ್ಮಕವಾಗಿ
ವಿವಾದಾಂಶ ನಂ.3 : ನಕಾರಾತ್ಮಕವಾಗಿ
ವಿವಾದಾಂಶ ನಂ.4 : ನಕಾರಾತ್ಮಕವಾಗಿ
ವಿವಾದಾಂಶ ನಂ.5 : ನಕಾರಾತ್ಮಕವಾಗಿ
ಹೆಚ್ಚುವರಿ ವಿವಾದಾಂಶ ನಂ.1: ನಕಾರಾತ್ಮಕವಾಗಿ
ವಿವಾದಾಂಶ ನಂ.6: ಅಂತಿಮ ಆದೇಶದಂತೆ,

ಈ ಕೆಳಕಂಡ ಕಾರಣಗಳಿಗಾಗಿ,

**ಕಾರಣಗಳು**

10. ವಿವಾದಾಂಶ ನಂ.1 ರಿಂದ 5 ಹಾಗೂ ಹೆಚ್ಚುವರಿ ವಿವಾದಾಂಶ 1 : ವಿವಾದಾಂಶ ನಂ.1 ರಿಂದ 5 ಹಾಗೂ ಹೆಚ್ಚುವರಿ ವಿವಾದಾಂಶ ನಂ.1 ಒಂದನ್ನೊಂದು ಅವಲಂಬಿಸಿರುವುದರಿಂದ ಅವುಗಳನ್ನು ಒಂದೇ ರೀತಿಯ ಚರ್ಚೆ, ವಿಮರ್ಶೆಗೆ ಒಳಪಡಿಸಬೇಕಾದ ಅವಶ್ಯಕತೆ ಇರುತ್ತದೆ. ಆದುದರಿಂದ ಅವುಗಳ ಪುನರಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ದಾವಾ ಆಸ್ತಿಯು ಮದ್ದೂರು ತಾಲೂಕು, ಆತಗೂರು ಹೋಬಳಿ ಹೂತಗೆರೆ ಗ್ರಾಮದ ಸರ್ವೆ ನಂಬರ್ 282 ಹಳೆ ಸರ್ವೆ ನಂಬರ್ 118/3 ಮತ್ತು ಪ್ರಸ್ತುತ ರೀ ಸರ್ವೇ ನಂಬರ್ 628 ರ ವಿಸ್ತೀರ್ಣ 4.2.11.84 ಎಕರೆ ಜಮೀನಾಗಿರುತ್ತದೆ. ದಾವಾ ಆಸ್ತಿಯನ್ನು ವಾದಿಯ ಹಿರಿಯರಾದ ಲೇಟ್ ಗಫರ್ ಖಾನ್ ರವರು ಆತಗೂರು ಗ್ರಾಮದಲ್ಲಿ ದಿನಾಂಕ 15-05-1966 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ಎರಡು ಆಸ್ತಿಗಳನ್ನು ಖರೀದಿಸಿರುತ್ತಾರೆ. ಸದರಿ ಆಸ್ತಿಗಳು ಲೇಟ್ ಗಫರ್ ಖಾನ್ ರವರ ಸ್ವಯಾರ್ಜಿತವಾದ ಆಸ್ತಿಗಳಾಗಿರುತ್ತವೆ. ಗಫರ್ ಖಾನ್ ರವರು ತಮ್ಮ ಜೀವಿತ ಕಾಲದವರೆಗೆ ಸದರಿ ಆಸ್ತಿಗಳ ಹಕ್ಕುದಾರ ಮತ್ತು ಮಾಲೀಕರಾಗಿ ಸ್ವಾಧೀನದಲ್ಲಿದ್ದರು. ಇವರು ದಿನಾಂಕ 03-04-1992 ರಂದು ಮೃತಪಟ್ಟಿರುತ್ತಾರೆ. ಗಫರ್ ಖಾನ್ ರವರಿಗೆ ವಾದಿ ಮತ್ತು ಪ್ರತಿವಾದಿ ನಂ.1 ಮತ್ತು 8 ರಿಂದ 11 ಮತ್ತು ಇವರ ಹೆಂಡತಿ 12 ನೇ ಪ್ರತಿವಾದಿಯು ಕಾನೂನುಬದ್ಧ ವಾರಸುದಾರರಾಗಿರುತ್ತಾರೆ. ಗಫರ್ ಖಾನ್ ರವರ ಮರಣದ ನಂತರ ಒಟ್ಟು ಕುಟುಂಬದಲ್ಲಿ ಸದರಿ ಆಸ್ತಿಯು ಮುಂದುವರೆದಿರುತ್ತದೆ. ಆದ್ದರಿಂದ ಸದರಿ ಆಸ್ತಿಯು ಮೇಲ್ಕಂಡವರ ಪಿತ್ರಾರ್ಜಿತವಾದ ಆಸ್ತಿಯಾಗಿರುತ್ತದೆ. ಪರಿಸ್ಥಿತಿ ಈ ರೀತಿ ಇರುವಾಗ ಮೇಲ್ಕಂಡ ಒಟ್ಟು ಕುಟುಂಬದವರುಗಳು ಒಪ್ಪಿ ದಿನಾಂಕ 14-08-2000 ರಂದು ಪಂಚಾಯತ್ ಪಾಲುಪಟ್ಟಿಯನ್ನು ಮಾಡಿಕೊಂಡಿದ್ದು, ಸದರಿ ಪಂಚಾಯತ್ ಪಾಲುಪಾರಿಕತ್ತಿನಲ್ಲಿ ದಾವಾ ಆಸ್ತಿಯು ಸೇರಿರುವುದಿಲ್ಲ. 1 ನೇ ಪ್ರತಿವಾದಿಯು ಇತರ ಒಟ್ಟು ಕುಟುಂಬದ ಸದಸ್ಯರ ಅನುಮತಿ ಇಲ್ಲದೆ ಅಕ್ರಮವಾಗಿ ತಮ್ಮ ಹೆಸರಿಗೆ ಖಾತೆಯನ್ನು ಮಾಡಿಕೊಂಡಿರುತ್ತಾರೆ.

12. ವಾದಿಯು ತಮ್ಮ ದಾವಾ ಪತ್ರದಲ್ಲಿ ಮುಂದುವರೆದು ತಿಳಿಸುತ್ತಾ, 1 ನೇ ಪ್ರತಿವಾದಿಯು ಅಕ್ರಮವಾಗಿ ಒಟ್ಟು ಕುಟುಂಬದ ಯಾವುದೇ ಸದಸ್ಯರ ಸಹಿಗಳನ್ನು ಪಡೆಯದೆ ದಾಖಲೆಗಳನ್ನು ಸೃಷ್ಠಿಸಿಕೊಂಡಿರುತ್ತಾರೆ. 1 ನೇ ಪ್ರತಿವಾದಿಗೆ 2000 ನೇ ಸಾಲಿನಲ್ಲಿ ಆದ ಪಂಚಾಯತ್ ಪಾಲುಪಟ್ಟಿಯಲ್ಲಿ ದಾವಾ ಆಸ್ತಿ ಸೇರಿರುವುದಿಲ್ಲವೆಂದು ತಿಳಿದಿದ್ದರೂ ಸಹ ವಾದಿ ಮತ್ತು ಇತರ ಕುಟುಂಬದ ಸದಸ್ಯರಿಗೆ ಮೋಸ ಮಾಡಿ ದಾಖಲೆಗಳನ್ನು ಸೃಷ್ಠಿಸಿಕೊಂಡಿರುತ್ತಾರೆ. ಸದರಿ ಪಂಚಾಯತ್ ಪಾಲುಪಟ್ಟಿಯಲ್ಲಿಯೇ 1 ನೇ ಪ್ರತಿವಾದಿಯು ಅವಿವಾಹಿತ ಕುಟುಂಬ ಸದಸ್ಯರ ವಿವಾಹ ಮತ್ತು ಮನೆಯ ಜವಬ್ದಾರಿಯನ್ನು ನೋಡಿಕೊಳ್ಳುವುದಾಗಿ ತಿಳಿಸಿರುತ್ತಾರೆ. ಆದರೆ ಆ ಕಾರ್ಯವನ್ನು 1 ನೇ ಪ್ರತಿವಾದಿಯು ಮಾಡಿರುವುದಿಲ್ಲ. 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದ ಸದಸ್ಯರು ಅಕ್ರಮವಾಗಿ ಖಾತೆ ಮಾಡಿಕೊಂಡು 13 ನೇ ಪ್ರತಿವಾದಿಗೆ ದಿನಾಂಕ 26-03-2010 ರಂದು ನೋಂದಾಯಿತ ಕ್ರಯಪತ್ರವನ್ನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬರೆದುಕೊಟ್ಟಿರುತ್ತಾರೆ. 1 ನೇ ಪ್ರತಿವಾದಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದಿದ್ದರೂ ಕೂಡ ಸದರಿ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯ ಪತ್ರವು ವಾದಿಯ ಹಕ್ಕಿಗೆ ಬದ್ಧಪಡಿಸುವುದಿಲ್ಲ. ನಂತರದಲ್ಲಿ 13 ನೇ ಪ್ರತಿವಾದಿಯು ಅಕ್ರಮವಾಗಿ 14 ನೇ ಪ್ರತಿವಾದಿಗೆ ದಿನಾಂಕ 09-02-2012 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಆದ್ದರಿಂದ ಸದರಿ ಕ್ರಯ ಪತ್ರವು ವಾದಿಯ ಹಕ್ಕಿಗೆ ಬದ್ಧಪಡಿಸುವುದಿಲ್ಲ. ಆದ್ದರಿಂದ ಸದರಿ ಕ್ರಯ ಪತ್ರವು ಕಾನೂನುಬಾಹಿರ ಮತ್ತು ಅಕ್ರಮವಾದ ಕ್ರಯಪತ್ರವಾಗಿದ್ದು, ರದ್ದುಪಡಿಸುವಂತಹ ಪತ್ರವಾಗಿರುತ್ತದೆ. ಆದಕಾರಣದಿಂದ ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಹೂಡಿರುವುದಾಗಿ ತಿಳಿಸಿರುತ್ತಾರೆ.

13. ವಾದಿಯು ತನ್ನ ದಾವೆಯನ್ನು ಸಾಬೀತುಪಡಿಸುವ ಉದ್ದೇಶದಿಂದ ತನ್ನನ್ನು ಪಿಡಬ್ಲ್ಯೂ.1 ಎಂದು ವಿಚಾರಣೆ ಮಾಡಿಕೊಂಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರಿಕೆಯ ಮೂಲಕ ಸಲ್ಲಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಾವೆಗೆ ಪೂರಕವಾಗಿ ತಮ್ಮ ಸಾಕ್ಷವನ್ನು ನುಡಿಯುತ್ತಾ, ದಾವೆಯನ್ನು ಡಿಕ್ರಿ ಮಾಡುವಂತೆ ವಿನಂತಿಸಿಕೊಂಡಿರುತ್ತಾರೆ.

14. ಪಿಡಬ್ಲೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ತಿಳಿಸುತ್ತಾ, ಸರ್ವೆ ನಂ.628/ಆರ್ ಎಸ್ ರ ವಿಸ್ತೀರ್ಣ 4 ಎಕರೆ 2 ಗುಂಟೆ ಜಮೀನು ಪ್ರಸ್ತುತ 13 ನೇ ಪ್ರತಿವಾದಿಯಾದ ಸುದೇಶನಾಯಕರವರ ಹೆಸರಿನಲ್ಲಿ ಬರುತ್ತದೆ. ತಾನು ದಾವಾ ಆಸ್ತಿಯನ್ನು

ಇತ್ತೀಚೆಗೆ ನೋಡಿರುವುದಿಲ್ಲ. ದಾವಾ ಜಮೀನನ್ನು ತುಂಬಾ ವರ್ಷಗಳ ಹಿಂದೆ ನೋಡಿರುವುದಾಗಿ ತಿಳಿಸಿರುತ್ತಾರೆ. ಅಂದರೆ ಪ್ರಸ್ತುತ ದಾವಾ ಆಸ್ತಿಯ ಬಗ್ಗೆ ವಾದಿಗೆ ಮಾಹಿತಿ ಇರುವುದಿಲ್ಲವೆಂದು ಕಂಡುಬಂದಿರುತ್ತದೆ. ಪ್ರಸ್ತುತ ದಾವಾ ಆಸ್ತಿಯನ್ನು ಖರೀದಿಸಿದ 13 ನೇ ಪ್ರತಿವಾದಿಯು ಇಟ್ಟಿಗೆ ಕಾರ್ಖಾನೆ ಮಾಡಿರುವುದಾಗಿ, ಅದಕ್ಕಾಗಿ ಸಾಕಷ್ಟು ಹಣ ವ್ಯಹಿಸಿರುವುದಾಗಿ ತಿಳಿಸಿರುತ್ತಾರೆ. ವಾದಿಯ ಪ್ರಕಾರ ಈ ಹಿಂದೆ ತಮ್ಮ ಕುಟುಂಬದಲ್ಲಿ ಆದ ಪಾಲುಪಟ್ಟಿಯಂತೆ ದಾವಾ ಆಸ್ತಿಯನ್ನು ತನ್ನ ಮದುವೆಗಾಗಿ 1 ನೇ ಪ್ರತಿವಾದಿಗೆ ಬಿಟ್ಟುಕೊಡಲಾಗಿದ್ದು, ಅವರು ಅದನ್ನು ಮಾರಿ ವಿವಾಹ ಮಾಡಬೇಕೆಂಬ ಒಪ್ಪಂದವಾಗಿತ್ತು. ಆದ್ದರಿಂದ ವಾದಿಯೇ ದಾವಾ ಆಸ್ತಿಯ ಮಾಲೀಕರಾಗಿರುತ್ತಾರೆಂದು ತಿಳಿಸಿರುತ್ತಾರೆ. ನಂತರ ಪ್ರತಿವಾದಿಗಳ ಪರ ವಕೀಲರ ಸೂಚನೆಗಳನ್ನು ತಿರಸ್ಕರಿಸಿರುತ್ತಾರೆ.

15. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದ್ದು, ನಿಪಿ.1 ವಾದಿ ಮತ್ತು 1 ರಿಂದ 10 ನೇ ಪ್ರತಿವಾದಿಗಳ ವಂಶವೃಕ್ಷವಾಗಿದೆ. ಆ ಬಗ್ಗೆ ಈ ದಾವೆಯಲ್ಲಿ ವಿವಾದವಿರುವುದಿಲ್ಲ. ನಿಪಿ.2 ದಾವಾ ಆಸ್ತಿಯಾದ ಸರ್ವೆ ನಂ.628/ಆರ್.ಎಸ್. ವಿಸ್ತೀರ್ಣ 4.02.11.84 ಎಕರೆ ಜಮೀನು ಎಂ.ಆರ್.ನಂ.23/2009-10 ರ ಖಾತಾ ಬದಲಾವಣೆಯ ಮೇರೆಗೆ ಈ ದಾವೆಯ ಪ್ರಫುಲ್ ಚಂದ್ರ ಅಂದರೆ 11 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ. ನಿಪಿ.3 ದಾವಾ ಆಸ್ತಿಯ 2008-09 ನೇ ಸಾಲಿನಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿಯ ಖಾತೆ ಇರುತ್ತದೆ. ನಿಪಿ.4 ದಾಖಲೆಯನ್ನು ಪರಿಶೀಲಿಸಲಾಗಿ, ದಿನಾಂಕ 04-05-1962 ರಂದು ಗಫರ್ ಖಾನ್ ಅಂದರೆ ವಾದಿಯ ತಂದೆಯು ಸರ್ವೆ ನಂ.118 ರ ವಿಸ್ತೀರ್ಣ 2 ಎಕರೆ ಜಮೀನು ಖರೀದಿಸಿರುತ್ತಾರೆ. ದಾವಾ ಆಸ್ತಿ ವಾದಿಯ ತಂದೆ ಗಫರ್ ಖಾನ್ ರವರ ಸ್ವಯಾರ್ಜಿತ ಆಸ್ತಿಯಾಗಿತ್ತು ಎಂದು ಪಹಣಿ ಹಾಜರುಪಡಿಸಿದ್ದು, ಆ ಬಗ್ಗೆ ವಿವಾದವಿರುವುದಿಲ್ಲ. ನಿಪಿ.9 ದಾಖಲೆಯು ಎಂ ಆರ್ ನಂ.4/1992-93 ರಂತೆ ವಾದಿ ಮತ್ತು ಗಫರ್ ಖಾನ್ ರವರ ಮಕ್ಕಳುಗಳ ಒಪ್ಪಿಗೆ ಮೇರೆಗೆ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದು ನಮೂದಿದೆ. ಸದರಿ ಅಂಶವನ್ನು ವಾದಿಯು ತಿರಸ್ಕರಿಸಿರುತ್ತಾರೆ. ಅದೇ ರೀತಿ ನಿಪಿ.10 ದಾಖಲೆಯು ದಿನಾಂಕ 12-01-2010 ರಂದು 1 ನೇ ಪ್ರತಿವಾದಿಯು

11 ನೇ ಪ್ರತಿವಾದಿಯಾದ ಎಸ್.ಕೆ. ಪ್ರಫುಲ್ ಚಂದ್ರ ದಾವಾ ಆಸ್ತಿ ಸರ್ವೆ ನಂ.282 (ಹಳೆ ಸರ್ವೆ ನಂ.118/3 ರ) ಪ್ರಸ್ತುತ ರೀಸರ್ವೆ ನಂ.628 ರ ವಿಸ್ತೀರ್ಣ 3 ಎಕರೆ 38 ಗುಂಟೆ ಜಮೀನನ್ನು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಅದೇ ರೀತಿ ನಿಪಿ.11 ದಿನಾಂಕ 26-03-2010 ರಂದು 1 ನೇ ಪ್ರತಿವಾದಿಯು 11 ನೇ ಪ್ರತಿವಾದಿಗೆ ಅದೇ ಸರ್ವೆ ನಂಬರ್ ನಲ್ಲಿ ಉಳಿಕೆ ಆಸ್ತಿ 4.2.11.84 ಗುಂಟೆ ಆಸ್ತಿಯನ್ನು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಈ ದಾವೆಯಲ್ಲಿ ವಾದಿಯು ನಿಪಿ.16 ಎಂದು ಒಂದು ನೋಂದಾಯಿತವಲ್ಲದ ಪಂಚಾಯತ್ ಪಾಲುಪಾರಿಕತ್ತನ್ನು ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಲಾಗಿ, ದಿನಾಂಕ 14-08-2000 ರಂದು ವಾದಿ ಮತ್ತು 1 ನೇ ಪ್ರತಿವಾದಿ ಮತ್ತು ಮೃತ ಗಫರ್ ಖಾನ್ ರವರ ಇತರ ಮಕ್ಕಳು ಆಸ್ತಿಗಳನ್ನು ವಿಭಾಗ ಮಾಡಿಕೊಂಡ ಬಗ್ಗೆ ನಮೂದಿದ್ದು, ಸದರಿ ದಾಖಲೆಯು ನೋಂದಾಯಿತವಲ್ಲದ ದಾಖಲೆಯಾಗಿದ್ದು, ಭಾರತೀಯ ನೋಂದಣಿ ಅಧಿನಿಯಮ 1908 ರ ಕಲಂ 17 ರ ಪ್ರಕಾರ 100 ರೂ.ಗಳಿಗಿಂತ ಹೆಚ್ಚಿನ ಸ್ಥಿರ ಆಸ್ತಿಯ ಹಕ್ಕಿನ ವರ್ಗಾವಣೆ ಆದಾಗ ಅಂತಹ ದಾಖಲೆಗಳು ಕಡ್ಡಾಯವಾಗಿ ನೋಂದಣಿಯಾಗಬೇಕಿರುತ್ತದೆ. ಒಂದು ವೇಳೆ ಸದರಿ ದಾಖಲೆಗಳು ನೋಂದಣಿಯಾಗದಿದ್ದರೆ ಕರ್ನಾಟಕ ಮುದ್ರಾಂಕ ಶುಲ್ಕ ಪಾವತಿ ಅಧಿನಿಯಮ (Karnataka Stamp Act) ಕಲಂ 32 ಮತ್ತು 33 ರಂತೆ 1 ಪಟ್ಟು ಮುದ್ರಾಂಕ ಶುಲ್ಕ ಮತ್ತು 10 ಪಟ್ಟು ದಂಡ ಶುಲ್ಕವನ್ನು ನ್ಯಾಯಾಲಯವು ವಿಧಿಸುತ್ತದೆ. ನಿಪಿ.16 ದಾಖಲೆಯನ್ನು ನ್ಯಾಯಾಲಯವು ಸ್ವಾಧೀನಕ್ಕೆ ಪಡೆದಿದ್ದು, ರೂ.54,620/- ದಂಡ ಶುಲ್ಕವನ್ನು ವಿಧಿಸಿದ್ದು, ಅದನ್ನು ವಾದಿಯು ಪಾವತಿ ಮಾಡಿರುತ್ತಾರೆ. ಸದರಿ ದಾಖಲೆಯ 7 ನೇ ಪುಟದಲ್ಲಿ ಸರ್ವೆ ನಂ.108 ಮತ್ತು 118/3 ರ ವಿಸ್ತೀರ್ಣ 4 ಎಕರೆ ಜಮೀನು ಇದ್ದು, ಇಬ್ಬರು ತಂಗಿಯರು (1) ಶಬೀನಾ ಬಾನು(2) ಮುಬೀನಾ ಬಾನುರವರ ಮದುವೆಗೆ ಈ ಆಸ್ತಿಯನ್ನು ಮಾರುವುದು ಎಂದು ತಿಳಿಸಲಾಗಿದೆಯೇ ವಿನಃ ವಾದಿಗೆ ಸದರಿ ಆಸ್ತಿ ಬಂದಿರುವುದಿಲ್ಲ. ಅದೂ ಅಲ್ಲದೆ ಮತ್ತೊಬ್ಬ ತಂಗಿ ಶಬೀನಾ ಬಾನುರವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ.

16. ವಾದಿಯ ಪರ ಸಾಕ್ಷಿದಾರರಾದ ಶಬೀನಾಬಾನುರವರು ತಮ್ಮನ್ನು ಪಿಡಬ್ಲೂ.2 ಎಂದು ವಿಚಾರಣೆ ಮಾಡಿಕೊಂಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ

ಪತ್ರಿಕೆಯ ಮೂಲಕ ಸಲ್ಲಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದಿಯ ದಾವೆಗೆ ಪೂರಕವಾಗಿ ತಮ್ಮ ಸಾಕ್ಷವನ್ನು ನುಡಿದಿರುತ್ತಾರೆ.

17. ಇವರು ತಮ್ಮ ಪಾಟೀ ಸವಾಲಿನಲ್ಲಿ ತಿಳಿಸುತ್ತಾ, ಮುಬೀನಾ ಬಾನು ತಮ್ಮ ಮನೆಯ ಪಕ್ಕದವರಾಗಿದ್ದು, ಅವರ ಕುಟುಂಬದ ಬಗ್ಗೆ ತಮಗೆ ತಿಳಿದಿರುತ್ತದೆ. ಅದೇ ರೀತಿ ದಾವಾ ಆಸ್ತಿಯ ಬಗ್ಗೆ ಸಹ ತಮಗೆ ತಿಳಿದಿರುತ್ತದೆ. ವಿಭಾಗ ಮಾಡಿಕೊಂಡಾಗ ಆಸ್ತಿಗಳನ್ನು ಗಫರಿ ಖಾನ್ ರವರ ಗಂಡು ಮಕ್ಕಳು ಮಾತ್ರ ಹಂಚಿಕೊಂಡಿದ್ದರು. ಗದ್ದೆಯನ್ನು ಮಾತ್ರ ವಾದಿಯ ಮದುವೆಗೆ ಇಟ್ಟಿದ್ದರು. ವಿಭಾಗ ಪತ್ರಕ್ಕೆ ತಾನು ಸಹಿ ಮಾಡಿರುವುದಿಲ್ಲ. ಅದನ್ನು ಸ್ಟ್ಯಾಂಪ್ ಪೇಪರ್ ನಲ್ಲಿ ಬರೆದರೆ ಇಲ್ಲವೇ ಎಂಬ ಬಗ್ಗೆ ತಮಗೆ ತಿಳಿದಿಲ್ಲ. ಆ ಪತ್ರವನ್ನು ತಾನು ಓದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಆ ಪತ್ರದಲ್ಲಿ ಗದ್ದೆಯನ್ನು ವಾದಿಯ ಮದುವೆಗೆ ಬಿಡಲಾಗಿತ್ತೆಂದು ತಿಳಿಸಿರುವ ವಿಚಾರವನ್ನು ಬೇರೆಯವರಿಂದ ಕೇಳಿ ತಿಳಿದುಕೊಂಡಿರುತ್ತಾರೆಂದು ಕಂಡುಬಂದಿರುತ್ತದೆ.

18. ವಾದಿಯ ಪರ ಮತ್ತೊಬ್ಬ ಸಾಕ್ಷಿದಾರರಾದ ಹಜೀರಾ ಖಾನಂರವರು ತಮ್ಮನ್ನು ಪಿಡಬ್ಲ್ಯೂ.3 ಎಂದು ವಿಚಾರಣೆ ಮಾಡಿಕೊಂಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರಿಕೆಯ ಮೂಲಕ ಸಲ್ಲಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದಿಯ ದಾವೆಗೆ ಪೂರಕವಾಗಿ ತಮ್ಮ ಸಾಕ್ಷವನ್ನು ನುಡಿದಿರುತ್ತಾರೆ.

19. ಇವರು ತಮ್ಮ ಪಾಟೀ ಸವಾಲಿನಲ್ಲಿ ತಿಳಿಸುತ್ತಾ, ತನಗೆ ವಾದಿಯ ಪರಿಚಯವಿರುತ್ತದೆ. ಇದಾಯತ್ ಉಲ್ಲಾಖಾನ್ ವಾದಿ ಮದುವೆ ಮಾಡುವ ಸಂದರ್ಭದಲ್ಲಿ ದಾವಾ ಜಮೀನನ್ನು ಮಾರಾಟ ಮಾಡಿ, ಅದರಲ್ಲಿ ಬಂದಂತಹ ಹಣದಿಂದ ವಾದಿಯ ಮದುವೆ ಮಾಡಬೇಕೆಂದು ಕೇಳಿದರು. ಹಾಗಾಗಿ ಈ ದಾವೆಯನ್ನು ಹೂಡಿರುತ್ತಾರೆ. ಮುಬೀನಾರವರ ತಂದೆಗೆ ಎಷ್ಟು ಆಸ್ತಿ ಇತ್ತು ಎಂಬ ಬಗ್ಗೆ ತಮಗೆ ತಿಳಿದಿದೆ. ಅವರ ಸಹೋದರರ ನಡುವೆ ವಿಭಾಗವಾಗಿರುವ ಬಗ್ಗೆ ತಮಗೆ ತಿಳಿದಿಲ್ಲ.

20. ಈ ದಾವೆಯ 2 ನೇ ಪ್ರತಿವಾದಿಯು ಪ್ರತಿವಾದಿ 1(ಎ), 3 ರಿಂದ 7 ರವರ ಪರವಾಗಿ ತನ್ನನ್ನು ಡಿಡಬ್ಲೂ.1 ಎಂದು ವಿಚಾರಣೆ ಮಾಡಿಕೊಂಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರಿಕೆಯ ಮೂಲಕ ಸಲ್ಲಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪ್ರತಿವಾದಿಯರ ದಾವೆಗೆ ಪೂರಕವಾಗಿ ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ.

21. ಡಿಡಬ್ಲ್ಯೂ.1 ರವರು ನ್ಯಾಯಾಲಯದಲ್ಲಿ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ನಿಡಿ.1 ಮದ್ದೂರು ಗ್ರಾಮದ ಸರ್ವೆ ನಂ.835 ಪೈ ವಿಸ್ತೀರ್ಣ 9 ಗುಂಟೆ, ನಿಡಿ.2 ಅದೇ ಗ್ರಾಮದ ಸರ್ವೆ ನಂ.693/2 ರ ವಿಸ್ತೀರ್ಣ 4 ಗುಂಟೆ, ನಿಡಿ.3 ಅದೇ ಗ್ರಾಮದ ಸರ್ವೆ ನಂ.705/24 ರ ವಿಸ್ತೀರ್ಣ 5 ಗುಂಟೆ, ನಿಡಿ.4 ಮದ್ದೂರು ನಗರದಲ್ಲಿರುವ ಕ್ರಮ ಸಂಖ್ಯೆ 77, ಆಸ್ತಿ ನಂ.77/67 ರ ವಿಸ್ತೀರ್ಣ 20.3/4 x 41 ಅಡಿ 12 x 20, 13 x 14 ಅಡಿ, 18 x 20 ¾ ರ ಆಸ್ತಿಯು ಈಗಲೂ ಸಹ ಮೃತ ಗಫರ್ ಖಾನ್ ರವರ ಹೆಸರಿನಲ್ಲಿ ಖಾತೆ ಇರುತ್ತದೆ. ಈ ಆಸ್ತಿಗಳನ್ನು ಈ ದಾವೆಯಲ್ಲಿ ತೋರಿಸಿರುವುದಿಲ್ಲ. ಡಿಡಬ್ಲ್ಯೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ತಿಳಿಸುತ್ತಾ, ಹೂತಗೆರೆ ಗ್ರಾಮದ ಜಮೀನುಗಳನ್ನು ತಮ್ಮ ತಾತ 1963 ನೇ ಇಸವಿಯಲ್ಲಿ ಖರೀದಿಸಿರುತ್ತಾರೆ. ತಮ್ಮ ತಾತನಿಗೆ 4 ಗಂಡು ಮಕ್ಕಳು, 5 ಹೆಣ್ಣು ಮಕ್ಕಳು ಇರುತ್ತಾರೆ. ಗಫರ್ ಖಾನ್ ರವರು ಮನೆಯ ಯಜಮಾನರಾಗಿರುತ್ತಾರೆ. ಆದ್ದರಿಂದ ಆಸ್ತಿಗಳೆಲ್ಲಾ ಅವರ ಹೆಸರಿನಲ್ಲಿ ಇರುತ್ತವೆ.

"ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳು ಮದ್ದೂರಿನ ಪೇಟೆ ಬೀದಿಯಲ್ಲಿ ಮತ್ತು ಕೆಮ್ಮಣ್ಣು ನಾಲೆಯ ಬಳಿ ಇವೆ ಮತ್ತು ಮದ್ದೂರಿನ ಮುಸ್ಲಿಂ ಬ್ಲಾಕ್ ನಲ್ಲಿ ವಾಸದ ಮನೆಗಳಿವೆ. ಈ ಎಲ್ಲಾ ಆಸ್ತಿಗಳು ಇದುವರೆಗೂ ವಿಭಾಗವಾಗಿರುವುದಿಲ್ಲ. ಎಲ್ಲಾ ಆಸ್ತಿಗಳು ಈಗಲೂ ಕೂಡ ಒಟ್ಟು ಕುಟುಂಬದಲ್ಲಿವೆ. ಈ ಎಲ್ಲಾ ಆಸ್ತಿಗಳು ನಮ್ಮ ಒಟ್ಟು ಕುಟುಬಂದ ಆಸ್ತಿಗಳು ಎಂದು ತೋರಿಸಲು ನಮ್ಮ ಬಳಿ ದಾಖಲೆಗಳು ಇವೆ ಎಂದು ತಿಳಿಸಿರುತ್ತಾರೆ.

ಅದೇ ರೀತಿ ತಮ್ಮ ಕುಟುಬಂದ ಸದಸ್ಯರೆಲ್ಲರೂ ತಲಾ 5000/- ಹಾಕಿ 1992-93 ನೇ ಇಸವಿಯಲ್ಲಿ ಖಾತೆಯನ್ನು ಮಾಡಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಸಾಕ್ಷಿಯು ನಿಪಿ.16 ದಾಖಲೆಯನ್ನು ತಿರಸ್ಕರಿಸಿ ತಮ್ಮ ಲಿಖಿತ ಹೇಳಿಕೆಗೆ ಪೂರಕವಾಗಿ ತಮ್ಮ

ಸಾಕ್ಷ್ಯವನ್ನು ನುಡಿದಿರುತ್ತಾರೆ."

22. ಅದೇ ರೀತಿ ವಾದಿಯು ರೂ.5000/- ಪಡೆದು ಹಕ್ಕು ನಿವೃತ್ತಿ ಪತ್ರ ಬರೆದು ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಸದರಿ ಹಕ್ಕು ನಿವೃತ್ತಿ ಪತ್ರ ಪಡೆದ ಬಗ್ಗೆ ಪ್ರತಿವಾದಿಯರು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನಂತರದಲ್ಲಿ ನೋಂದಾಯಿತ ಪಾಲುಪಾರಿಕತ್ ಆಗಿದೆ ಎಂಬ ಬಗ್ಗೆ ಕೇಳಲಾದ ಎಲ್ಲಾ ಪ್ರಶ್ನೆಗಳನ್ನು ತಿರಸ್ಕರಿಸಿರುತ್ತಾರೆ. ಆದ್ದರಿಂದ ಪಂಚಾಯತಿ ಪಾಲು ಪಾರಿಕತ್ತು ಆಗಿತ್ತು ಎಂದು ಸಾಬೀತುಪಡಿಸುವ ಸಂಪೂರ್ಣ ಜವಬ್ದಾರಿ ವಾದಿಯ ಮೇಲೆಯೇ ಇರುತ್ತದೆ.

**<u>ನಿರ್ದಿಷ್ಟ ಪರಿಹಾರ ಕಾಯ್ದೆ 1963 ಕಲಂ 34</u>**

ಸ್ಥಾನಮಾನ ಅಥವಾ ಹಕ್ಕನ್ನು ಘೋಷಿಸುವ ಬಗ್ಗೆ ನ್ಯಾಯಾಲಯದ ವಿವೇಚನೆ ಯಾವುದೆ ವಿಧಿಸಮ್ಮತ ವ್ಯಕ್ತಿತ್ವಕ್ಕೆ ಅಥವಾ ಯಾವುದೇ ಸ್ವತ್ತಿನ ಬಗ್ಗೆ ಯಾವುದೇ ಹಕ್ಕನ್ನು ಹೊಂದಿರುವುದಕ್ಕೆ ಹಕ್ಕನ್ನು ಹೊಂದಿರುವ ಯಾವನೆ ವ್ಯಕ್ತಿಯು ಅಂಥ ವ್ಯಕ್ತಿಗೆ ಅಥವಾ ಹಕ್ಕಿಗೆ ಆತನ ಹಕ್ಕನು ನಿರಾಕರಿಸುವಲ್ಲಿ ಹಿತಾಸಕ್ತನಾದ ಯಾವನೆ ವ್ಯಕ್ತಿಯ ವಿರುದ್ಧ ದಾವೆ ಹೂಡಬಹುದು ಮತ್ತು ನ್ಯಾಯಾಲಯ ತನ್ನ ವಿವೇಚನಾನುಸಾರ ಅದನ್ನು ಹಾಗೆ ಹಕ್ಕುಳ್ಳುವನೆಂದು ಅದರಲ್ಲಿ ಘೋಷಿಸಬಹದು.

***<u>2016(4) KCCR 3064,</u>***
***B.S. Mahegha Vs. The Secretary of Karnataka Secondary Education Examination Board***

"ಈ ಪ್ರಕರಣದಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ತಿಳಿಸುತ್ತಾ, ನಿರ್ದೀಷ್ಟ ಪರಿಹಾರ ಕಾಯಿದೆ ಕಲಂ 34 ರಂತೆ ದಾವೆಯನ್ನು ಹಕ್ಕು ಘೋಷಣೆ ಕೋರಿ ಸಲ್ಲಿಸಿದಾಗ ಕಾಲಪರಿಮಿತಿ ಅಧಿನಿಯಮದ ಅನುಚ್ಛೇದ 58 ರಂತೆ ನಿಗದಿತ ಕಾಲಾವಧಿಯಲ್ಲಿ ಅಂದರೆ ವ್ಯಾಜ್ಯ ಕಾರಣ ಉಂಟಾದ 3 ವರ್ಷಗಳ ಒಳಗೆ ದಾವೆಯನ್ನು ದಾಖಲಿಸಬೇಕು ಆಗ ಮಾತ್ರ ದಾವೆಯು ಉರ್ಜಿತವಾಗುತ್ತದೆ ಎಂದು ತಿಳಿಸಿರುತ್ತದೆ."

23. ನ್ಯಾಯಾಲಯದ ಮುಂದೆ ಇರುವ ಸಂಪೂರ್ಣ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಪರಿಶೀಲಿಸಿದ್ದು, ವಾದಿ ಮತ್ತು ಪ್ರತಿವಾದಿ ನಂ.1 ರಿಂದ 10 ರವರುಗಳು ಒಂದೇ ಕುಟುಂಬದ ಸದಸ್ಯರು ಎಂಬ ಬಗ್ಗೆ ವಿವಾದವಿರುವುದಿಲ್ಲ. ದಾವಾ ಆಸ್ತಿ ಮತ್ತು ಇತರ ಒಟ್ಟು ಕುಡುಬಂದ ಆಸ್ತಿಗಳ ಬಗ್ಗೆ ಗಫರ್ ಖಾನ್ ವಾದಿಯ ತಂದೆಯಾಗಿದ್ದು, ಅವರ ಮರಣದ ನಂತರ ವಾದಿಯ ಸಹೋದರ ಮತ್ತು ಸಹೋದರಿಯರು ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. ಅದರಂತೆ ದಿನಾಂಕ 14-08-2000 ರಂದು ನೋಂದಾಯಿತವಲ್ಲದ ಪಂಚಾಯತಿ ಪಾಲುಪಾರಿಕತ್ತಿನಂತೆ ವಿಭಾಗ ಮಾಡಿಕೊಂಡಿದ್ದು, ಎಲ್ಲಾ ಆಸ್ತಿಗಳನ್ನು ಗಫರ್ ಖಾನ್ ರವರ ಗಂಡು ಮಕ್ಕಳೇ ಹಂಚಿಕೊಂಡಿದ್ದು, ವಾದಿ ಮತ್ತು ಆಕೆಯ ಸಹೋದರಿಯರಿಗೆ ವಿವಾಹವಾಗದ ಕಾರಣ ಆಸ್ತಿಯನ್ನು ಬಿಟ್ಟಿದ್ದು, ಅದನ್ನು ಮಾರಾಟ ಮಾಡಿ ಇವರುಗಳ ಮದುವೆ ಮಾಡಿಕೊಡಲು 1 ನೇ ಪ್ರತಿವಾದಿಗೆ ತಿಳಿಸಲಾಗಿದ್ದು, ಆದರೆ 1 ನೇ ಪ್ರತಿವಾದಿಯು ಅಕ್ರಮವಾಗಿ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡು 11 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. 11 ನೇ ಪ್ರತಿವಾದಿಯು ಸದರಿ ಆಸ್ತಿಯನ್ನು 12 ನೇ ಪ್ರತಿವಾದಿಗೆ (14 ನೇ ಪ್ರತಿವಾದಿ)ಗೆ ಮಾರಾಟ ಮಾಡಿರುತ್ತಾರೆ ಎಂಬುದು ವಾದಿಯ ವಾದವಾಗಿದ್ದು, ಅದೇ ರೀತಿ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸುತ್ತಾ, ದಾವಾ ಆಸ್ತಿಯನ್ನು ವಾದಿ ಮತ್ತು ಇತರ ಕುಟುಂಬದ ಸದಸ್ಯರ ಒಪ್ಪಿಗೆ ಮೇರೆಗೆ 1 ನೇ ಪ್ರತಿವಾದಿಗೆ ಬಿಟ್ಟು ಕೊಡಲಾಗಿತ್ತು. ಅದರ ಪ್ರತಿಯಾಗಿ ವಾದಿ ಮತ್ತು ಇನ್ನೊಬ್ಬ ಸಹೋದರಿಗೆ ತಲಾ 5000/- ರೂ.ಗಳ ಹಣ ನೀಡಲಾಗಿತ್ತು ಎಂದು ತಿಳಿಸಿರುತ್ತಾರೆ. ಉಭಯ ಪಕ್ಷಗಾರರೇ ತಮ್ಮ ಪ್ರತಿಪಾದನೆಯನ್ನು ಸಾಬೀತುಪಡಿಸಬೇಕಾಗಿರುತ್ತದೆ. ಮೊದಲಿಗೆ ದಾವಾ ಆಸ್ತಿಯು ವಾದಿಯ ಪಾಲಿಗೆ ಬಂದಿತ್ತು ಎಂಬ

ಬಗ್ಗೆ ವಾದಿಯು ಯಾವುದೇ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ನಿಪಿ.16 ದಾಖಲೆಯನ್ನು ಪರಿಶೀಲಿಸಲಾಗಿ, ವಾದಿ ಮತ್ತು ಅವರ ತಂಗಿಯಾದ ಶಬೀನಾ ಎಂಬ ಹೆಣ್ಣು ಮಕ್ಕಳಿಗೆ ವಿವಾಹಕ್ಕಾಗಿ ದಾವಾ ಆಸ್ತಿಯನ್ನು ಬಿಟ್ಟುಕೊಡಲಾಗಿತ್ತು ಎಂದು ತಿಳಿಸಿರುತ್ತಾರೆ. ವಾದಿಯ ಪ್ರಕಾರ ತನ್ನ ಮದುವೆಯನ್ನು 1ನೇ ಪ್ರತಿವಾದಿ ಮಾಡದ ಕಾರಣ ಈ ದಾವೆ ಹೂಡಿರುವುದಾಗಿ ತಿಳಿಸಿರುತ್ತಾರೆ. ಆಗಿದ್ದಲ್ಲಿ ವಾದಿಯ ವಿವಾಹವನ್ನು ಯಾರು ಮಾಡಿದ್ದಾರೆಂಬ ಬಗ್ಗೆ ವಿವರಣೆ ಇಲ್ಲ. ಅದೂ ಅಲ್ಲದೆ ಈ ದಾವೆಯಲ್ಲಿ ಶಬೀನಾರವರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ. ವಾದಿಯ ಪ್ರಕಾರವೇ ಇವರು ಅವಶ್ಯಕ ಪಕ್ಷಗಾರರಾಗಿರುತ್ತಾರೆ. ಆದರೆ ಅವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ.

24. ನಿಪಿ.16ರ ನೋಂದಾಯಿತವಲ್ಲದ ವಿಭಾಗ ಪತ್ರದಲ್ಲಿ ಸಹಿ ಮಾಡಿದ್ದಾರೆಂದು ಹೇಳುವ ಕುಟುಂಬದ ಸದಸ್ಯರು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿರುತ್ತಾರೆ. ಅವರು ನ್ಯಾಯಾಲಯದಲ್ಲಿ ಹಾಜರಾಗಿ ಸದರಿ ವಿಚಾರವನ್ನು ತಿಳಿಸಬೇಕಾಗಿರುತ್ತದೆ. ಅದೇ ರೀತಿ ನಿಡಿ.2 ರಿಂದ ನಿಡಿ.4ರ ಆಸ್ತಿಗಳು ಈಗಲೂ ಸಹ ಮೃತ ಗಫರ್ ಖಾನ್ ರವರ ಹೆಸರಿನಲ್ಲಿಯೇ ಮುಂದುವರೆದಿವೆ. ಸದರಿ ಆಸ್ತಿಗಳು ಯಾರ ಭಾಗಕ್ಕೂ ಹೋಗಿಲ್ಲ. ಪರಿಸ್ಥಿತಿ ಈ ರೀತಿ ಇರುವಾಗ ವಾದಿಯು ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳನ್ನು ಮತ್ತು ಅವಶ್ಯಕ ಪಕ್ಷಗಾರರನ್ನು ಈ ದಾವೆಯಲ್ಲಿ ಮಾಡಿರುವುದಿಲ್ಲವೆಂದು ಕಂಡುಬಂದಿರುತ್ತದೆ. ಮೊದಲಿಗೆ ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ದಾವಾ ಆಸ್ತಿಯು ತನ್ನ ಪಾಲಿಗೆ ಬಂದಿತ್ತು ಎಂದು ಸಾಬೀತುಪಡಿಸಲು ವಿಫಲರಾಗಿರುತ್ತಾರೆ ಮತ್ತು ವಾದಿಯು ತಾನು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುವುದಿಲ್ಲವೆಂಬ ಅಂಶವನ್ನು ಒಪ್ಪಿರುತ್ತಾರೆ. ಆದಕಾರಣದಿಂದ ವಾದಿಯು ದಾವಾ

ಆಸ್ತಿಯಲ್ಲಿ ತಮ್ಮ ಮಾಲೀಕತ್ವ ಮತ್ತು ಸ್ವಾಧೀನವನ್ನು ಸಾಬೀತುಪಡಿಸಿರುವುದಿಲ್ಲ. ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನು ಮಾಡದ ಕಾರಣ, ದಾವೆಯಲ್ಲಿ ತನ್ನ ಮಾಲೀಕತ್ವ ಮತ್ತು ಸ್ವಾಧೀನವನ್ನು ಸಾಬೀತುಪಡಿಸದ ಕಾರಣ ವಾದಿಯು ಈ ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರಲ್ಲ. ಆದಕಾರಣದಿಂದ 1 ನೇ ಪ್ರತಿವಾದಿಯು ಅಕ್ರಮವಾಗಿ ತಮ್ಮ ಹೆಸರಿಗೆ ಖಾತೆ ಮಾಡಿ ದಿನಾಂಕ 26-03-2010 ರಂದು ಅಕ್ರಮವಾಗಿ ಮಾರಾಟ ಮಾಡಿದ್ದಾರೆ ಎಂಬ ಬಗ್ಗೆ ಚರ್ಚಿಸಿರುವುದಿಲ್ಲ. ಅದೇ ರೀತಿ ವಾದಿಯು ದಿನಾಂಕ 26-03-2010 ರಂದು 13 ನೇ ಪ್ರತಿವಾದಿಗೆ ಆಗಿರುವ ಕ್ರಯ ಪತ್ರವು ರದ್ದುಪಡಿಸಲು ಶೂನ್ಯಕರವೆಂದು ಘೋಷಿಸುವಂತೆ ನ್ಯಾಯಾಲಯದಲ್ಲಿ ಕೋರಿದ್ದು, ಆದರೆ ನ್ಯಾಯಾಲಯದಲ್ಲಿ ಕೇವಲ ರೂ.50 ಅನ್ನು ಮಾತ್ರ ಪಾವತಿಸಿರುತ್ತಾರೆ. ಆದರೆ ಕರ್ನಾಟಕ ನ್ಯಾಯಾಲಯ ಶುಲ್ಕ ಪಾವತಿ ಅಧಿನಿಯಮ ಕಲಂ 24(ಡಿ) ರಲ್ಲಿ ಕ್ರಯಪತ್ರದ ಆಧಾರದ ಮೇಲೆ ಮೌಲ್ಯ ಮಾಪನ ಮಾಡಬೇಕಿರುತ್ತದೆ. ವಾದಿಯು ನಿಗಧಿತ ನ್ಯಾಯಾಲಯ ಶುಲ್ಕ ಪಾವತಿಸಿರುವುದಿಲ್ಲವೆಂದು ಕಂಡುಬಂದಿರುತ್ತದೆ. ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ, ವಾದಿಯು ತಮ್ಮ ದಾವೆಯನ್ನು ಸಾಬೀತುಪಡಿಸಲು ಮತ್ತು ದಾವಾ ಆಸ್ತಿ ತನ್ನ ಮಾಲೀಕತ್ವದ ಆಸ್ತಿ ಎಂದು ಸಾಬೀತುಪಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ವಿವಾದಾಂಶ ನಂ. 1 ರಿಂದ 5 ಹಾಗೂ ಹೆಚ್ಚುವರಿ ವಿವಾದಾಂಶ 1 ಅನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

**25. ವಿವಾದಾಂಶ ನಂ.6:** ವಿವಾದಾಂಶ ನಂ.1 ರಿಂದ 5 ಹಾಗೂ ಹೆಚ್ಚುವರಿ ವಿವಾದಾಂಶ 1 ಕ್ಕೆ ನೀಡಿರುವ ವಿವರವಾದ ಚರ್ಚೆಯಿಂದ ಮತ್ತು ಅವುಗಳಿಗೆ ನೀಡಿರುವ ಉತ್ತರಗಳಿಂದ ವಿವಾದಾಂಶ ನಂ.6 ಕ್ಕೆ ಈ ಕೆಳಗಿನಂತೆ ಆದೇಶ ಮಾಡಿರುತ್ತೇನೆ.

**ಆದೇಶ**

ವಾದಿಯ ದಾವೆಯನ್ನು ವಜಾ ಮಾಡಲಾಗಿದೆ.

ಖರ್ಚಿನ ಬಗ್ಗೆ ಆದೇಶವಿಲ್ಲ.

ತೀರ್ಪಿನಂತೆ ಡಿಕ್ರಿ ಬರೆಯಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ಗಣಕೀಕೃತ ಯಂತ್ರದ ಮೂಲಕ ಬೆರಳಚ್ಚು ಮಾಡಿಸಿ ನಂತರ ಅದು ನನ್ನಿಂದ ಪರಿಷ್ಕರಿಲಸ್ಪಟ್ಟಿದ್ದು ದಿನಾಂಕಃ 02-04-2026 ನೇ ಇಸವಿಯಂದು ಪರಿಷ್ಕರಿಸಲ್ಪಟ್ಟ ತೀರ್ಪನ್ನು ಬಹಿರಂಗ ನ್ಯಾಯಾಲಯದಲ್ಲಿ ಓದಲಾಯಿತು.)

**[ಕೆ. ಗೋಪಾಲಕೃಷ್ಣ]**
**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಮದ್ದೂರು.

ಅನುಬಂಧ

ವಾದಿ ಪಕ್ಷದ ಪರವಾಗಿ ವಿಚಾರಣೆ ಮಾಡಿದ ಸಾಕ್ಷದಾರರ ಪಟ್ಟಿಃ

ಪಿಡಬ್ಲ್ಯೂ-1 : ಮುಬೀನಾ ಬಾನು
ಪಿಡಬ್ಲ್ಯೂ-2 : ಶಬೀನಾ ಬಾನು
ಪಿಡಬ್ಲ್ಯೂ-3 : ಹಜೀರಾ ಖಾನಂ

ವಾದಿಯರ ಪಕ್ಷದ ಪರವಾಗಿ ನಿಶಾನೆಯಾಗಿ ಗುರುತಿಸಲ್ಪಟ್ಟ ದಾಖಲೆಗಳುಃ

ನಿಪಿ-1 : ವಂಶವೃಕ್ಷ
ನಿಪಿ.2 : ಎಂ ಆರ್ ಪ್ರತಿ
ನಿಪಿ-3 : ಆರ್ ಟಿ ಸಿ
ನಿಪಿ-4 : ದಿನಾಂಕ 04-05-1962 ರ ಕರಯಪತ್ರದ ದೃಢೀಕೃತ ನಕಲು
ನಿಪಿ-5 : ಮರಣ ಪ್ರಮಾಣ ಪತ್ರ
ನಿಪಿ-6 ಮತ್ತು 7: ಎರಡು ಕೈಬರಹದ ಆರ್ ಟಿ ಸಿ ಗಳು
ನಿಪಿ-8 : ಆರ್ ಟಿ ಸಿ
ನಿಪಿ-9 : ಎಂ ಆರ್ ಪ್ರತಿ
ನಿಪಿ-10 : ದಿನಾಂಕ 12-01-2010 ರ ಕ್ರಯ ಕರಾರಿನ ದೃಢೀಕೃತ ನಕಲು
ನಿಪಿ-11 : ದಿನಾಂಕ 26-03-2010 ರ ಕ್ರಯ ಪತ್ರದ ದೃಢೀಕೃತ ನಕಲು
ನಿಪಿ-12 ರಿಂದ 14: ಆರ್ ಟಿ ಸಿ ಗಳು
ನಿಪಿ-15 : ಎಂ.ಆರ್. ಪ್ರತಿ
ನಿಪಿ.16 : ಪಾಲುಪಟ್ಟಿ ದಿನಾಂಕ 14-08-2000

ಪ್ರತಿವಾದಿಯರ ಪಕ್ಷದ ಪರವಾಗಿ ವಿಚಾರಣೆ ಮಾಡಿದ ಸಾಕ್ಷದಾರರ ಪಟ್ಟಿ

ಡಿಡಬ್ಲ್ಯೂ-1 : ಅಮೀರ್ ಖಾನ್

ಪ್ರತಿವಾದಿಯರ ಪಕ್ಷದ ಪರವಾಗಿ ನಿಶಾನೆಯಾಗಿ ಗುರುತಿಸಲ್ಪಟ್ಟ ದಾಖಲೆಗಳುಃ

ನಿಡಿ-1 ರಿಂದ 4: ಆರ್ ಟಿ ಸಿ ಗಳು
ನಿಡಿ-5 ಮತ್ತು 6: ಅಸೆಸ್ ಮೆಂಟ್ ಲಿಸ್ಟ್ ಎಕ್ಸ್ ಟ್ರ್ಯಾಕ್ಟ್‌ಗಳು
ನಿಡಿ-7 : ಆರ್ ಟಿ ಸಿ

**[ಕೆ. ಗೋಪಾಲಕೃಷ್ಣ]**
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಮದ್ದೂರು.